ಜಗದೀಶ್ ತಾಲ್ಲೂಕಿನಲ್ಲಿ ಪ್ರಭಾವಶಾಲಿ ರಾಜಕಾರಣಿಯಾಗಿ ಬೆಳೆದಿದ್ದರಿಂದ ಸರಕಾರಿ ಅಧಿಕಾರಿಗಳು ಆತನ ಅಕ್ರಮವನ್ನು ತಿಳಿದೂ ಮೌನವಾಗಿದ್ದರು. ಶಿಸ್ತಿನಿಂದ ಕರ್ತವ್ಯಪಾಲನೆಗೆ ಮುಂದಾದಾಗ ಆಮಿಷ ಅಥವಾ ಬೆದರಿಕೆಯ ತಂತ್ರ ಬಳಸಲಾಗುತ್ತಿತ್ತು. ಕೆಲ ವರ್ಷಗಳ ಹಿಂದೆ ವಾಚರ್ ಒಬ್ಬರು ಅಕ್ರಮವನ್ನು ಪತ್ತೆ ಹಚ್ಚಿದ್ದರಿಂದಾಗಿ ಅಮಾನುಷವಾಗಿ ಹತ್ಯೆಯಾಗಿದ್ದರು. ಅದು ದೊಡ್ಡ ಸುದ್ದಿಯಾಗಲೇ ಇಲ್ಲ.

ಕಾಲಾಂತರದಲ್ಲಿ ತಾಲ್ಲೂಕಿನಲ್ಲಿಯೂ ಪತ್ರಿಕೆಗಳು ಆರಂಭಗೊಂಡವು. ಆಧುನಿಕತೆ, ತಾಂತ್ರಿಕ ಬೆಳವಣಿಗೆಗಳು ಜನರಿಗೆ ಶಕ್ತಿ ನೀಡಿತು. ದೇಶಾದ್ಯಂತ ತನಿಖಾ ಪತ್ರಿಕೋದ್ಯಮ ದೊಡ್ಡ ಸಂಚಲನವನ್ನುಂಟು ಮಾಡಿತ್ತು. ಅದರ ಪ್ರಭಾವ ಇಲ್ಲಿಯೂ ಆಗಿತ್ತು. ಜಗದೀಶನ ದರ್ಪ, ಅವನ ಪುಂಡರ ರಗಳೆಗಳಿಂದ ಜನ ರೋಸಿ ಹೋಗಿದ್ದರು. ಜಗದೀಶನ ಮರಗಳ್ಳತನ, ಅಕ್ರಮ ದಂಧೆ ಬಹಳಷ್ಟು ಜನರಿಗೆ ತೆರೆದುಕೊಂಡಿತ್ತು.

ಪರಿಸ್ಥಿತಿ ಬದಲಾಗುತ್ತಿದ್ದಂತೆ, ಪ್ರಶ್ನಿಸುವವರು ಹೆಚ್ಚಾಗಿ ಜಗದೀಶನ ಅಡ್ಡೆಗೆ ಬೆದರಿಕೆ

